(DR. R. NAGAN GOWDA.)

they offered to supply later on, the Department refused. But the Company insisted that they were supplying according to the terms of the order and that we should purchase. That matter was referred to arbitration.

Sri M. LINGANNA.—What is the quantity supplied?

Dr. R. NAGAN GOWDA.—That is given in the answer. But there is a mistake. It is stated as 156 tons. It is not so. It is 166 tons. This may please be corrected.

Sri B. Y. NEELE GOWDA.—What is the award passed by the arbitrator?

Dr. R. NAGAN GOWDA.—That the order of the Government is correct.

Lands granted for cultivation under Depressed Class Darkhast rules in Bangalore North Taluk.

Q.—817. Sri R. MUNISWAMIAH (Bangalore North—Scheduled Castes).—

Will the Government be pleased to state :—

(*a*) the number of applications received from Harijans for lands for cultivation under Depressed Class Darkhast rules in Bangalore North Taluk, from 1st April 1954 ;

(*b*) the number of persons who have been granted lands under the said rules from 1st April 1954 ?

A.—Sri Kadidal MANJAPPA.—(Minister for Revenue and Public Works).—

(*a*) 69.

(*b*) 45.

ಶ್ರೀ ಆರ್. ಮುನಿಸ್ವಾಮಯ್ಯ.—ಇನ್ನೂ ಉಳಿದಿರ ತಕ್ಕ ಅರ್ಜಿಗಳ ಸ್ಥಿತಿ ಏನಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅದರಲ್ಲಿ 19 ಅರ್ಜಿಗಳನ್ನು ವಜಾಮಾಡಲಾಗಿದೆ. ಐದು ಅರ್ಜಿಗಳು pendingನಲ್ಲಿವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಸ್ಥಳಪರೀಕ್ಷೆ ನಡೆದ ನಂತರ ಅವನ್ನು ವಜಾಮಾಡಲಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನು ಕೊಡುವುದಕ್ಕೆ ಆಗುವುದಿಲ್ಲ ಎಂದು ಕಾರಣವನ್ನು ನಮೂದು ಮಾಡಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಮತ್ತೊಂದು ಸಲ ಸ್ಥಳ ಪರೀಕ್ಷೆ ಮಾಡಿಕೊಡುವುದಕ್ಕಾಗುವುದಿಲ್ಲ ವೆಂದು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳೀಯ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆ.

Depressed Classes Amelioration Grant for the K.G.F. Area for 1954-55.

Q.—805. Sri P. M. SWAMIDURAI (K.G.F.—Scheduled Castes).—

Will the Government be pleased to state :—

(*a*) the amelioration grant sanctioned to K.G.F. area for the year 1954-55 ;

(*b*) the amount so far spent?

A.—Sri T. CHANNIAH (Minister for Public Health and Local Self-Government) [On behalf of Sri K. Hanumanthaiya (Chief Minister)].—

(*a*) Rs. 11,500.

(*b*) Rs. 11,500.

Sri P. M. SWAMIDURAI.—Sir, as per the answer, I have no suplementaries to put. But I want a clarification. So far as I have known, the amount has not been spent. But in the answer, it is given here as Rs.11,500. Will the Government kindly see to it?

Sri T. CHANNIAH.—If the amount has not been spent, we will see that it will be spent for the purpose for which it is sanctioned.

Depressed Class Commissioner. (work assigned.)

Q.—853. Sri V. R. NAIDU.—(Malleswaram).—

Will the Government be pleased to state :—

(*a*) the work assigned to the Depressed Class Commissioner;

(*b*) whether there is a committee to advise him ?

A.—Sri A. G. RAMACHANDRA RAO (Minister for Law and Education) [On behalf of Sri K. Hanumanthaiya (Chief Minister)].—

(*a*) Work connected with the amelioration of Depressed Classes in Mysore, and the schemes for the welfare of Scheduled Tribes, Ex-Criminal Tribes

and removal of untouchability with the assistance of the Government of India.

(*b*) No.

ಶ್ರೀ ವಿ. ಆರ್. ನಾಯ್ಡು.—ಇದರಲ್ಲಿ ಉತ್ತರ ಕೊಡುವವರು ಮುಖ್ಯ ಮಂತ್ರಿಗಳು ಎಂದು ಇದೆ. ಅವರು ಬಂದಿಲ್ಲವೇ ?

ಅಧ್ಯಕ್ಷರು.—ಬಂದಿಲ್ಲ ಎಂಬುದು ತಮಗೇ ಕಾಣುತ್ತದೆ.

ಶ್ರೀ ವಿ. ಆರ್. ನಾಯ್ಡು.—ಅವರ ಮನಸ್ಸಿನಲ್ಲಿ ಏನು ಇದೆ ಎಂಬುದನ್ನು ಬೇರೆ ಮಂತ್ರಿಗಳು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್ —ಸರಕಾರದಲ್ಲಿ ಏನು information ಇದೆಯೋ ಅದನ್ನು ಕೊಡುತ್ತೇವೆ. ಮನಸ್ಸಿನಲ್ಲಿರುವುದು ಬೇಡ.

ಶ್ರೀ ವಿ. ಆರ್. ನಾಯ್ಡು.—ನಾನು ಅವರನ್ನು ನೋಡಿ 3 ದಿವಸಗಳಾಯಿತು. Depressed Class Commissionerಗೆ ಯಾವ ಯಾವ ಕೆಲಸಗಳನ್ನು ಒದಗಿಸಿ ಕೊಡಲಾಗಿದೆ ಎಂಬುದು ನನ್ನ ಪ್ರಶ್ನೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರದಲ್ಲೇ ಕೊಟ್ಟಿದೆ. Depressed Class Amelioration work ಮತ್ತು Scheduled Tribes ಅವರ ಹಿತ ದೃಷ್ಟಿಯಿಂದ ಮಾಡಬೇಕಾದ ಅಭಿವೃದ್ಧಿ ಕೆಲಸ ಮತ್ತು removal of untouchability ಈ ಮೂರು ಕೆಲಸಗಳನ್ನು ಅವರು ನೋಡಿಕೊಳ್ಳುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಭಾರತ ಸರ್ಕಾರದಿಂದ ಸಹಾಯವನ್ನು ಪಡೆದು ಮೈನೂರು ಸಂಸ್ಥಾನದಲ್ಲಿರತಕ್ಕ ನಿಮ್ನ ತರಗತಿಗಳಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳು ಏಗ್ಗೆರೆ ಎಂದಿದೆ. Depressed Class Commissioner ರವರು ಏನಾದರೂ Policy ಇಟ್ಟುಕೊಂಡು ಕೆಲಸ ಮಾಡುತ್ತಾರೆಯೇ ? ಹರಿಜನರಿಗೆ ಜಾತಿ ಸಂಬಂಧವಾಗಿ ಏನಾದರೂ ಹೆಚ್ಚು ಕಡಿಮೆ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪಾಲಿಸಿ ಇದೆ. ಸರಕಾರದವರು ಪ್ರತಿವರ್ಷವೂ ಮಂಜೂರು ಮಾಡಿದ ಕೆಲವು ಲಕ್ಷ ರೂಪಾಯಿಗಳಿಂದ Depressed Class ನವರಿಗೆ ಮನೆಗಳನ್ನು ಕಟ್ಟಿ ಕೊಡುವುದು, ಮನೆಗಳಿಗೆ ಬೇಕಾದ ಸ್ಥಿತುಗಳನ್ನು acquire ಮಾಡಿಕೊಳ್ಳುವುದು, removal of untouchability, Ex-criminal tribes colony ಗಳನ್ನು ಕಟ್ಟುವುದು. ಹಾಸ್ಟಲುಗಳನ್ನು ಕಟ್ಟುವುದು, ಎಲ್ಲೆಲ್ಲಿ ಹರಿಜನರಿಗೆ ಜಮೀನು ಸಾಗುವಾಡುವುದಕ್ಕೆ ಬೇಕೋ ಅಂಥ ಕಡೆ ಜಮೀನು ಇಲ್ಲದೆ ಇರುವವರಿಗೆ ಜಮೀನು ಕೊಡುವುದಕ್ಕೆ ಪ್ರಯತ್ನ ಮಾಡುವುದು ಇಂತಹ ನಾನಾ ಕೆಲಸಗಳನ್ನು ಅವರಿಗೆ ವಹಿಸಿದೆ. ಹರಿಜನರಲ್ಲಿ ವ್ಯತ್ಯಾಸ ಇರುವ ವಿಷಯ ಈ ಸಂಬಂಧದಲ್ಲಿ ಉದ್ಭವಿಸುವುದಿಲ್ಲ.

ಶ್ರೀ ವಿ. ಆರ್. ನಾಯ್ಡು.—ಅವರಲ್ಲಿ ಎಡಗೈ ಬಲಗೈ ಎಂಬ ವ್ಯತ್ಯಾಸ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ.

ಶ್ರೀ ವಿ. ಆರ್. ನಾಯ್ಡು.—ವ್ಯತ್ಯಾಸ ಇರುವಾಗ ಅದನ್ನು ಯಾವರೀತಿ ಉಪಯೋಗಿಸಿಕೊಳ್ಳುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೀವು ಕೇಳಿರುವ ಪ್ರಶ್ನೆ Depressed Class Commissionerಗೆ ಸಂಬಂಧಪಟ್ಟುದು.

ಶ್ರೀ ವಿ. ಆರ್. ನಾಯ್ಡು.—ಅಧ್ಯಕ್ಷ ಮಹಾಶಯರೇ, ಚೀಫ್ ಮಿನಿಸ್ಟರ್ ಹಾಜರಿದ್ದಿದ್ದರೆ ಚೆನ್ನಾಗಿತ್ತು. ಎಡಗೈ ಬಲಗೈ ವ್ಯತ್ಯಾಸವನ್ನು ಯಾವರೀತಿ ಸರ್ಕಾರದವರು ಉಪಯೋಗಿಸಿಕೊಳ್ಳುತ್ತಾರೆ ಎಂಬುದು ನನ್ನ ಪ್ರಶ್ನೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಪ್ರಶ್ನೆಗೆ ಸಂಬಂಧಿಸಿದ್ದಲ್ಲ.

ಶ್ರೀ ವಿ. ಆರ್. ನಾಯ್ಡು.—ಕಂಡದ್ದು ಹೇಳಿದರೆ ಕೆಂಡದಂತ ಕೋಪ ಎಂದು ಹೇಳುತ್ತಾರೆ. ಈಗ ಎಡಗೈ ಬಲಗೈಗೆ ದ್ರೋಹ ಮಾಡುತ್ತಿದ್ದಾರೆಂಬ ಕೂಗು ಎದ್ದಿದೆ. ಆದ್ದರಿಂದ ಈ ವ್ಯತ್ಯಾಸವನ್ನು ಸರಕಾರದವರು ಯಾವರೀತಿ ಉಪಯೋಗಿಸಿಕೊಳ್ಳುತ್ತಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎರಡು ಕೈಗಳನ್ನೂ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಈ ಕಮಿಷನರ್‌ರು ತಮಗೆ ಕೊಟ್ಟಿರುವ ಅಧಿಕಾರವನ್ನು ಒಂದು ಸಮಿತಿಯನ್ನು ಕೇಳಿ ಚಲಾಯಿಸುತ್ತಾರೆ ಎಂದು ಹೇಳಿದರು. ಆ ಸಮಿತಿಯನ್ನು ಯಾವರೀತಿ ಕಮಿಷನರು ಉಪಯೋಗಿಸುತ್ತಾರೆ ?

ಅಧ್ಯಕ್ಷರು.—ಅವರಿಗೆ ಸಲಹೆ ಕೊಡುವುದಕ್ಕೆ ಸಮಿತಿ ಇಲ್ಲವೆಂದು ಹೇಳಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಕಮಿಟಿ ಇರುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

ಶ್ರೀ ವಿ. ಆರ್. ನಾಯ್ಡು.—ಅಭಿಪ್ರಾಯದ ಮಾತೇನೂ ಅಲ್ಲ. ಆ ಕಮಿಟಿ ಇರುವುದು ದೇಶದಲ್ಲಿ ಒಳ್ಳೆಯದು. ಅದನ್ನು ಮಾಡಬೇಕಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಬೇರೆ ಪ್ರಶ್ನೆ. Information ಬೇಕಾದರೆ ಕೇಳಬಹುದು.

ಶ್ರೀ ವಿ. ಆರ್. ನಾಯ್ಡು.—ಕೇಳಿದ್ದಕ್ಕೆ ಜವಾಬು ಇಲ್ಲ. ಬೇರೆ ಕೇಳಿ ಏನು ಪ್ರಯೋಜನ ?

ಶ್ರೀ ಎ. ಜಿ. ರಾಮಚಂದ್ರರಾವ್.—Central Depressed Class Committee ಮಾಡಿದ್ದೇವೆ. ಈ ಕಮಿಟಿಯಲ್ಲಿ ತೀರ್ಮಾನವಾದ ಕೆಲವು ವಿಷಯಗಳನ್ನು implement ಮಾಡುತ್ತಾರೆ. ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳಲ್ಲಿ Depressed Class Advisory ಕಮಿಟಿಗಳನ್ನು ಮಾಡಿದ್ದೇವೆ. ಈ ಕಮಿಟಿಗಳು ತೆಗೆದುಕೊಳ್ಳತಕ್ಕ ತೀರ್ಮಾನಗಳನ್ನು ಕೂಡ ಅವರು implement ಮಾಡುವ ನಿಮ್ನ ವೇಶದಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದರೂ ಅದು ಬಡವರಿಗೆ ನಲ್ಲುತ್ತಾ, ಇಲ್ಲವೆಂಬುದನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲನೆ ಮಾಡುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ಯಾವುದಾದರೂ ಒಂದು ಯೋಜನೆಯನ್ನು ಹಾಕಿ ಅದಕ್ಕೆ amelioration grantನ್ನು ಕೊಟ್ಟರೆ ಅವರು ನಿರ್ಧರಿಸಿದ ಪಾಲಿಸಿಯ ಪ್ರಕಾರ ಅವರು ಕೆಲಸ ಮಾಡುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಏನೂ ಕೆಲಸಗಳು ಆಗಲೇ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಆ ತರಹ ಏನೂ ಆಗಿಲ್ಲ. ಸರಕಾರದ ಗಮನಕ್ಕೆ ಬಂದಿಲ್ಲ. ಅಲ್ಲಿ ಕೆಲಸಗಳು ನಡೆಯುತ್ತಿವೆ.

ಶ್ರೀ ಬಿ. ಆರ್. ನಾಯ್ಡು.—ಒಂಭತ್ತು ಡಿಸ್ಟ್ರಿಕ್ಟು ಗಳ ಪೈಕಿ ಕೋಲಾರದಲ್ಲಿ ಜಾಸ್ತಿ ಕೆಲಸ ಆಗುತ್ತಾ ಇರುವುದು ಎಂದರೆ ಒಪ್ಪಿ ಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಕೂಡ ಒಂದೇ ಸಮಾನಾಗಿ ಕೆಲಸ ನಡೆಯುತ್ತಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಡಗೈ, ಬಲಗೈ ಯವರ ಗಲಾಟೆಯಲ್ಲಿ ಬೋವಿಗಳಿಗೂ ಲಂಬಾಣಿ ಗರಿಗೂ ಏನೂ ಸಿಕ್ಕುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ !

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

Edagai and Balagai Harijans (Enquiries by the Depressed Class Commissioner on tour).

Q.—887. Sri A. MUNIYAPPA (Sidlaghatta—Chikballapur—Scheduled Castes).—

Will the Government be pleased to state :—

(*a*) whether it has come to their notice that the Mysore State Depressed Class Commissioner while on tour makes enquiries about the Harijans at the outset as to whether they are *Edagai* (Left hand) Harijans or *Balagai* (Right hand) Harijans ;

(*b*) the utility of asking for such information from them ?

A.—Sri T. CHANNIAH (Minister for Public Health and Local Self-Government).—[On behalf of Sri K. Hanumanthaiya (Chief Minister)].—

(*a*) No.

(*b*) Does not arise in view of reply given to clause (*a*).

ಶ್ರೀ ಎ. ಮುನಿಯಪ್ಪ.— ಈ ಉತ್ತರವನ್ನು ಒದಗಿಸಿದವರು ಯಾರು ?

ಶ್ರೀ ಟಿ. ಚನ್ನಯ್ಯ.—ಡಿಪಾರ್ಟ್‌ಮೆಂಟಿನವರು.

ಶ್ರೀ ಎ. ಮುನಿಯಪ್ಪ.—ಗೋರಿಬಿದನೂರು, ಶಿಡ್ಲಘಟ್ಟ, ಚಿಂತಾಮಣಿ—ಈ ಕಡೆ ಈ ಕಮಿಷನರು ಹೋದಾಗ ಪ್ರತಿಯೊಂದು ಕೇರಿಯಲ್ಲೂ ಅವರು ಎಡಗೈ ಯವರೇ, ಬಲಗೈಯವರೇ ಎಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಎಡಗೈ ಹರಿಜನ ಅಧಿಕಾರಿಗಳಿರುವಾಗ ಎಡಗೈ ಹರಿಜನರಿಗೂ, ಬಲಗೈ ಹರಿಜನ ಅಧಿಕಾರಿಗಳಿರುವಾಗ ಬಲಗೈ ಹರಿಜನರಿಗೂ ಹೆಚ್ಚಿಗೆ ಸರ್ಕಾರದ ಗ್ರಾಂಟು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಈ ಕಮಿಷನರು special ಆಗಿ recommend ಮಾಡಿದ ಕೇಸುಗಳ ಲ್ಲೆಲ್ಲಾ ಬಲಗೈ ಹರಿಜನರಿಗೇ ಹೆಚ್ಚಿಗೆ recommend ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ. ಸರ್ಕಾರದವರು ಆ ರೀತಿ ಎಡಗೈ ಬಲಗೈ ಯವರಿಗೆ ಭೇದಮಾಡಿ ಒಬ್ಬರಿಗೆ ಹೆಚ್ಚಿಗೆ preference ಕೊಡಬೇಕೆಂದಾಗಲಿ, ಇನ್ನೊಬ್ಬರಿಗೆ ಕಡಿಮೆ ಕೊಡಬೇಕೆಂದಾಗಲಿ ಭಾವನೆ ಇಟ್ಟುಕೊಂಡಿಲ್ಲ. ಆ ರೀತಿ ಮಾಡುತ್ತಲೂ ಇಲ್ಲ.

ಶ್ರೀ ಎ. ಮುನಿಯಪ್ಪ.—ನಾನು ಜವಾಬ್ದಾರಿಯುತವಾಗಿ ಕಮಿಷನರು ಹಾಗೆ ಹೇಳುತ್ತಿದ್ದಾರೆಂದು ಹೇಳುತ್ತೇನೆ. ಅದನ್ನು ತಾವು ಒಪ್ಪುತ್ತೀರಾ, ಇಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇಲ್ಲವೆಂದು ಹೇಳಿದ್ದೇನೆ.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಇವರು ಬಳ್ಳಾರಿಗೆ ಎಷ್ಟುಸಾರಿ ಹೋಗಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ಮುನಿಯಪ್ಪ.—ಈ ಪ್ರಶ್ನೆಯಲ್ಲ ನನ್ನ ಉದ್ದೇಶ ಇಷ್ಟೆ. ಈಗ ಏನಾಗುತ್ತಿದೆಯೆಂದರೆ, ಎಡಗೈ ಹರಿಜನ ಅಧಿಕಾರಿಗಳಿರುವ ಕಡೆ ಎಡಗೈ ಹರಿಜನರಿಗೇ ಸಾಮಾನ್ಯವಾಗಿ ಅನುಕೂಲವಾಗುತ್ತಿದೆ, ಬಲಗೈ ಹರಿಜನರಿರುವ ಕಡೆ ಬಲಗೈ ಹರಿಜನರಿಗೇ ಅನುಕೂಲವಾಗುತ್ತಿದೆ. ಹಾಗಾಗಕೂಡದು. ಎಲ್ಲರಿಗೂ ಸರ್ಕಾರದ ಹಣ ಸರಿಸಮಾನಾಗಿ ಹಂಚಿಕೆಯಾಗ ಬೇಕು. ಆದ್ದರಿಂದ ಸರ್ಕಾರದವರು ಈ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

Sri P. M. SWAMIDURAI.—I wanted to bring to the notice of Government that in view of so many questions put by Sri. Muniyappa, will the Government be pleased to make an enquiry into that and take suitable action against the Commissioner if he has done so ?

Sri T. CHANNIAH.—If any specific instances are brought to the notice of Government, they will be enquired into.

ಶ್ರೀ ಎಂ. ಮಾದಯ್ಯ.—ಈ ಪ್ರಶ್ನೆಯನ್ನು ಕೇಳಿರ ತಕ್ಕವರ ಉದ್ದೇಶ, ಡಿಪ್ರೆಸ್ಡ್‌ಕ್ಲಾಸಿಗೆ ಸೇರಿರತಕ್ಕ ನಾನಾ ಕೋಮುಗಳವರೆಲ್ಲರಿಗೂ ಸರ್ಕಾರದ ಗ್ರಾಂಟು ಸರಿಸಮಾನಾಗಿ ಹಂಚಿಕೆ ಯಾಗುವಂತಾಗಲಿ ಎಂದು.

Sri A. G. RAMACHANDRA RAO.—It has been already answered that we have no information on that point at all.

ಶ್ರೀ ಎಂ. ಮಾದಯ್ಯ.—ಡಿಪ್ರೆಸ್ಡ್ ಕ್ಲಾಸಿನಲ್ಲಿರ ತಕ್ಕ ಒಳ ಪಂಗಡಗಳವರು ತಮ್ಮ ತಮ್ಮ ಪಂಗಡಗಳಿಗೆ ಹೆಚ್ಚಿಗೆ ಸಹಾಯದ್ರವ್ಯ ಸಿಕ್ಕುತ್ತಿಲ್ಲವೆಂದು ಹೇಳುತ್ತಾ, population ಮೇಲೆ ಎಲ್ಲರಿಗೂ ಹಂಚಿಕೆ ಮಾಡ ಬೇಕೆಂದು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎಂ. ಮಾದಯ್ಯ.—ಈ ಮಾನ್ಯ ಸಭೆಯಲ್ಲ ಮುಲ್ಕ ಗೋವಿಂದರೆಡ್ಡಿಯವರು ಒಂದು ಪ್ರಶ್ನೆಹಾಕಿ ಬೋವಿಗಳಿಗೆ, ಲಂಬಾಣಿಯವರಿಗೆ ಹೆಚ್ಚಿಗೆ ಕೊಡು